ವೈದ್ಯಕೀಯ ಸೀಟು ಹೆಚ್ಚಿಸುವುದು

3797(4313); ಶ್ರೀ ಅಬ್ಬಯ್ಯ ಪ್ರಸಾದ್ (ಹುಬ್ಬಳ್ಳಿ–ಧಾರವಾಡ ಪೂರ್ವ)

ಅ) ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ (ಕಿಮ್ಸ್) ನಲ್ಲಿ ಹಾಲಿ ಇರುವ 150 ವೈದ್ಯಕೀಯ ಸೀಟ್‌ನಲ್ಲಿ 50 ಸೀಟ್‌ಗಳು ಕಡಿಮೆಯಾಗಿರುವ ಕಾರಣ ಉತ್ತರ ಕರ್ನಾಟಕದ ಬಡ ಅರ್ಹ ವಿದ್ಯಾರ್ಥಿಗಳ ವೈದ್ಯಕೀಯ ವಿದ್ಯಾಭ್ಯಾಸದಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸೀಟುಗಳನ್ನು ಕಡಿಮೆ ಮಾಡಲು ಕಾರಣಗಳೇನು;

ಇ) ಹಾಗಾದರೆ, ಹಾಲಿ ಇರುವ 150 ಸೀಟ್‌ಗಳನ್ನು ಮುಂದುವರಿಸಲು ಸರ್ಕಾರಕ್ಕೆ ಇರುವ ತೊಂದರೆ ಏನು;

ಈ) ಹಾಗಾದರೆ, ಎಲ್ಲಿಯವರೆಗೆ 100 ಸೀಟುಗಳನ್ನು ಕಾಯ್ದುಕೊಳ್ಳುವುದು?

ಡಾ॥ ಶರಣಪ್ರಕಾಶ ಪಾಟೀಲ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು)

ಅ) 2014–15 ನೇ ಸಾಲಿನಲ್ಲಿ ಯಾವುದೇ ಸೀಟುಗಳು ಕಡಿಮೆಯಾಗಿಲ್ಲ.

ಆ) ಇ) ಮತ್ತು ಈ) ಅನ್ವಯವಾಗುವುದಿಲ್ಲ.

ವೋಲ್ವೋ ಬಸ್ ಸಂಚಾರ ಪ್ರಾರಂಭಿಸುವುದು

3798(4425); ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ (ರಾಯಭಾಗ)

ಅ) ಬೆಳಗಾವಿ ಜಿಲ್ಲೆ ರಾಯಭಾಗ ತಾಲ್ಲೂಕು, ರಾಯಭಾಗದಿಂದ ಶಿರಡಿಯವರೆಗೂ ಹಾಗೂ ರಾಯಭಾಗದಿಂದ ಬೆಂಗಳೂರಿಗೆ ವೋಲ್ವೋ ಬಸ್ಸುಗಳ ಸೇವೆಯನ್ನು ಒದಗಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

ಆ) ಬಂದಿದ್ದಲ್ಲಿ ವೋಲ್ವೋ ಬಸ್ ಸೇವೆಯನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ಎಂದಿನಿಂದ ಪ್ರಾರಂಭಿಸಲಾಗುವುದು ?

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು)

ಅ) ಮತ್ತು ಆ) ರಾಯಭಾಗ ತಾಲ್ಲೂಕು, ರಾಯಭಾಗದಿಂದ ಶಿರಡಿಯವರೆಗೆ ಹಾಗೂ ರಾಯಭಾಗದಿಂದ ಬೆಂಗಳೂರಿಗೆ ವೋಲ್ವೋ ಬಸ್ಸುಗಳ ಸೇವೆಯನ್ನು ಒದಗಿಸುವ ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದ ಮುಂದೆ ಇರುವುದಿಲ್ಲ.

ದೌರ್ಜನ್ಯ ಪ್ರಕರಣಗಳು

3799(4618); ಶ್ರೀ ಮಹಾಲಿಂಗಪ್ಪ ಡಿ. ಐಹೊಳೆ (ರಾಯಭಾಗ)

ಅ) ಬೆಳಗಾವಿ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಜನಾಂಗದವರ ಮೇಲೆ ಆಗುತ್ತಿರುವ ದೌರ್ಜನ್ಯ ಪ್ರಕರಣಗಳೆಷ್ಟು; (ತಾಲ್ಲೂಕುವಾರು, ವರ್ಷವಾರು ಮಾಹಿತಿ ನೀಡುವದು.)

ಆ) ಸದರಿ ಜನಾಂಗದವರ ಮೇಲೆ ದೌಜನ್ಯ ಮಾಡುತ್ತಿರುವವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮವೇನು; ಅಂತಹವರ ಮೇಲೆ ಯಾವ ಯಾವ ಪ್ರಕರಣಗಳನ್ನು ಕಾನೂನಿನ ಅಡಿಯಲ್ಲಿ ದಾಖಲಿಸಿಕೊಳ್ಳಲಾಗಿದೆ; (ವಿವರ ನೀಡುವುದು)

ಇ) ಈ ರೀತಿಯ ಪ್ರಕರಣಗಳು ಇನ್ನು ಮುಂದೆ ನಡೆಯದಂತೆ ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್. ಆಂಜನೇಯ (ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) ಬೆಳಗಾವಿ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಜನಾಂಗದವರ ಮೇಲೆ ಆಗುತ್ತಿರುವ ದೌರ್ಜನ್ಯಗಳ ಕುರಿತು ದಾಖಲಾದ ಪ್ರಕರಣಗಳ ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.